# ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರ

ಬೆಳಗುಂಬ ರಸ್ತೆ, ತುಮಕೂರು – 572 103, ದೂರವಾಣಿ ಸಂಖ್ಯೆ 0816–2272280
**email : tudatmk2009@yahoo.co.in, website : tuda.co.in.**

## ಬಹಿರಂಗ ಹರಾಜು ಪ್ರಕಟಣೆ

ಕ್ರಮಾಂಕ ಟಿಯುಡಿಎ/ಶೆ.ವ.ಬ/ಮಳಿಗೆ ಹರಾಜು/01/2012–13 ದಿನಾಂಕ : 30–06–2012

ಈ ಪ್ರಾಧಿಕಾರವು ಶೆಟ್ಟಿಹಳ್ಳಿ ವಸತಿ ಬಡಾವಣೆಯಲ್ಲಿ ನಿರ್ಮಿಸಿರುವ ವಾಣಿಜ್ಯ ಮಳಿಗೆಗಳನ್ನು ಮಾಸಿಕ ಪ್ರೀಮೀಯಂ ಆಧಾರದ ಮೇಲೆ ಸ್ಥಳದಲ್ಲಿಯೇ ಬಹಿರಂಗ ಹರಾಜು ಮಾಡಲು ಉದ್ದೇಶಿಸಿರುತ್ತದೆಂದು ಸಾರ್ವಜನಿಕರಿಗೆ ಈ ಮೂಲಕ ತಿಳಿಸಿದೆ.

**ದಿನಾಂಕ 06–08–2012ರ ಬೆಳಗ್ಗೆ 11–30 ಗಂಟೆಗೆ**

**ಮಾಸಿಕ ಪ್ರೀಮಿಯಂ ಮೊಬಲಗು ಪ್ರತಿ ಮಳಿಗೆಗೆ ರೂ.3500**

| ಕ್ರಮ ಸಂಖ್ಯೆ | ಮಳಿಗೆ ಸಂಖ್ಯೆಗಳು | ಅಳತೆ | | | | ವಿಸ್ತೀರ್ಣ ಚ.ಮೀ.ಗಳಲ್ಲಿ |
|---|---|---|---|---|---|---|
| | | ಪೂರ್ವ | ಪಶ್ಚಿಮ | ಉತ್ತರ | ದಕ್ಷಿಣ | |
| 1 | 01 to 20 (Including Double Door Shops) | 4.50 | 4.50 | 3.10 | 3.10 | **13.95** |

### ಅರ್ಹತೆಗಳು

1. ಶೆಟ್ಟಿಹಳ್ಳಿ ವಸತಿ ಬಡಾವಣೆಯಲ್ಲಿ ರಿಂಗ್ ರಸ್ತೆಗೆ ಲಗತ್ತಾಗಿ ನಿರ್ಮಿಸಿರುವ ವಾಣಿಜ್ಯ ಮಳಿಗೆಗಳನ್ನು ಮಾಸಿಕ ಪ್ರೀಮಿಯಂ ಆಧಾರದ ಮೇಲೆ ದಿನಾಂಕ 06–08–2012ರ ಬೆಳಗ್ಗೆ 11.30 ಗಂಟೆಗೆ ಬಹಿರಂಗ ಹರಾಜನ್ನು ಸ್ಥಳದಲ್ಲಿಯೇ ನಡಸಲಾಗುವುದು.
2. ಹರಾಜಿನಲ್ಲಿ ಭಾಗವಹಿಸುವವರು ರೂ.10,000 ಗಳನ್ನು ನಗದು / ಡಿ.ಡಿ. ರೂಪದಲ್ಲಿ ದಿನಾಂಕ 06–08–2012 ರಂದು ಬೆಳಗ್ಗೆ 11.00 ಗಂಟೆಯೊಳಗಾಗಿ ಹರಾಜು ಸ್ಥಳದಲ್ಲಿ ತೆರೆಯುವ ಕೌಂಟರ್‌ನಲ್ಲಿ ಪಾವತಿಸಿ ಟೋಕನ್ ಪಡೆಯುವುದು.
3. ಒಂದಕ್ಕಿಂತ ಹೆಚ್ಚಿನ ಅಂಗಡಿ ಮಳಿಗೆಗಳನ್ನು ಪಡೆಯಲು ಇಚ್ಛಿಸುವವರು ಪ್ರತಿ ಮಳಿಗೆಗೆ ರೂ.10,000 ರಂತೆ ಪ್ರತ್ಯೇಕವಾಗಿ ಠೇವಣಿ ಪಾವತಿಸಿ ಹರಾಜಿನಲ್ಲಿ ಭಾಗವಹಿಸಬಹುದಾಗಿರುತ್ತದೆ.
4. ಹರಾಜಿಗೆ ಟೋಕನ್ ಪಡೆದವರು ಮಳಿಗೆಯ ಮಾಸಿಕ ಪ್ರೀಮಿಯಂ ನಿಲ್ಲುವವರೆಗೆ ಎಲ್ಲಾ ಮಳಿಗೆಗಳ ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಬಹುದು.
5. ಹರಾಜಾದ ಪ್ರೀಮಿಯಂನ 10 ತಿಂಗಳ ಮೊಬಲಗನ್ನು ಮುಂಗಡವಾಗಿ ಪಾವತಿಸಬೇಕಾಗುತ್ತದೆ. (Refundable)
6. ಪ್ರತಿ ಮಳಿಗೆಗೆ ರೂ.2.5 ಲಕ್ಷಗಳ ಮರುಪಾವತಿ (Non refundable) ಮಾಡದ ಮೊತ್ತವನ್ನು ಡಿ.ಡಿ.ರೂಪದಲ್ಲಿ ತಿಳುವಳಿಕೆ ತಲುಪಿದ 30 ದಿನಗಳೊಳಗಾಗಿ (ಮಳಿಗೆಯ ಸ್ಥಿರೀಕರಣದ ನಂತರ) ಪಾವತಿಸುವುದು. ಈ ಮೊತ್ತವನ್ನು ಮರುಪಾವತಿ ಮಾಡಲಾಗುವುದಿಲ್ಲ.
7. ಕನಿಷ್ಠ ಮಾಸಿಕ ಪ್ರೀಮಿಯಂ ಮೊಬಲಗು ಪ್ರತಿ ಮಳಿಗೆಗೆ ರೂ.3500 ಗಳಾಗಿರುತ್ತದೆ. ಈ ಮಾಹೆಯಾನ ಪ್ರೀಮಿಯಂಗೆ ಹೆಚ್ಚಳಕ್ಕೆ ಮಾತ್ರ ಹರಾಜು ಮೂಲಕ ಬಿಡ್ ಮಾಡಲಾಗುವುದು.
8. ಯಶಸ್ವಿ ಬಿಡ್‌ದಾರರು ಮರುಪಾವತಿಸುವ ಮೊಬಲಗಿನ ಶೇಕಡ 35 ರಷ್ಟನ್ನು ಸ್ಥಳದಲ್ಲಿ ಪಾವತಿಸತಕ್ಕದ್ದು.
9. ವಾಣಿಜ್ಯ ಮಳಿಗೆಗಳಿಗೆ ಅತ್ಯಂತ ಹೆಚ್ಚಿನ ಬಿಡ್ಡುದಾರರನ್ನು ತಾತ್ಕಾಲಿಕವಾಗಿ ಅಂಗೀಕರಿಸಿ, 6 ವರ್ಷಕ್ಕೆ ವಾರ್ಷಿಕ ಪರವಾನಗಿಯನ್ನು ನಗರಾಭಿವೃದ್ಧಿ ಪ್ರಾಧಿಕಾರದ ಸಮಿತಿಯಿಂದ (ಸ್ಥಿರೀಕರಣ) ಮಾಡಿಕೊಡಲಾಗುವುದು. ತದನಂತರ ಯಶಸ್ವಿ ಬಿಡ್ಡುದಾರರ ಖರ್ಚಿನಲ್ಲಿ ಮಾಸಿಕ ಪ್ರೀಮೀಯಂ ದರ ನಿಗಧಿ ಬಗ್ಗೆ ದಸ್ತಾವೇಜನ್ನು ಮಾಡಿಕೊಡಲಾಗುವುದು
10. ಮಾಸಿಕ ಪ್ರೀಮಿಯಂ ದರದ ಅವಧಿಯು ಸ್ವಾಧೀನಕ್ಕೆ ನೀಡಿದ ದಿನದಿಂದ 6 ವರ್ಷಗಳವರೆಗೆ ಮಾತ್ರ ಸೀಮಿತವಾಗಿರುತ್ತದೆ. ನಂತರ ಇದೇ ರೀತಿ ಹರಾಜು ಪ್ರಕ್ರಿಯೆ ಮಾಡಲಾಗುತ್ತದೆ.
11. ಮಾಸಿಕ ಪ್ರೀಮಿಯಂ ದರವು ವಾಸ್ತವ ದರಕ್ಕೆ ಪ್ರತಿ 1 ವರ್ಷಕ್ಕೆ ಶೇಕಡ 5 ರಷ್ಟು ಹೆಚ್ಚುವರಿಗೆ ಒಳಪಟ್ಟಿರುತ್ತದೆ. ಈ ಹೆಚ್ಚುವರಿಯು ಮಳಿಗೆ ಪಡೆದ ಮೊದಲನೇ ವರ್ಷಕ್ಕೆ ಅನ್ವಯವಾಗುವುದಿಲ್ಲ. ಎರಡನೇ ವರ್ಷದಿಂದ ಈ ಹೆಚ್ಚುವರಿಯನ್ನು ಜಾರಿಗೊಳಿಸಲಾಗುವುದು.
12. ಮಾಸಿಕ ಗುತ್ತಿಗೆ / ಬಾಡಿಗೆ ಬಿಡ್‌ದಾರರು ಮಳಿಗೆಯಲ್ಲಿ ನಡೆಸುವ ವ್ಯವಹಾರಕ್ಕೆ ಸಂಬಂಧಿಸಿದಂತೆ ಪರವಾನಗಿಯನ್ನು ಸೂಕ್ತ ಪ್ರಾಧಿಕಾರದಿಂದ ಪ್ರಚಲಿತ ಕಾಯ್ದೆಗಳನ್ವಯ ಪಡೆದುಕೊಳ್ಳತಕ್ಕದ್ದು ಮತ್ತು ಪರವಾನಗಿ ನವೀಕರಣದ ಪ್ರತಿ ಸಂದರ್ಭಗಳಲ್ಲಿಯೂ ಈ ಪ್ರಾಧಿಕಾರದಿಂದ ಅನುಮತಿಯನ್ನು ಕಡ್ಡಾಯವಾಗಿ ಪಡೆಯತಕ್ಕದ್ದು. ಬಿಡ್‌ದಾರರು ಯಾವುದೇ ಕಾರಣಕ್ಕೂ ತಮ್ಮ ಸ್ವಾಧೀನವನ್ನು ಬೇರೆಯವರಿಗೆ ವರ್ಗಾಯಿಸಲು, ಹಸ್ತಾಂತರಿಸಲು, ಉಪವಿಭಜನೆ ಮಾಡುವುದು ಇತ್ಯಾದಿಗಳನ್ನು ಮಾಡತಕ್ಕದ್ದಲ್ಲ. ಕಟ್ಟಡದ ಯಾವುದೇ ಭಾಗವನ್ನು ವಿರೂಪಗೊಳಿಸತಕ್ಕದ್ದಲ್ಲ. ಕಾನೂನು ಬಾಹಿರ ಚಟುವಟಿಕೆಗಳನ್ನು ನಡೆಸತಕ್ಕದ್ದಲ್ಲ.
13. ಕಟ್ಟಡವನ್ನು ಸ್ವಾಧೀನಕ್ಕೆ ಪಡೆಯುವ ಮುನ್ನಾ ಪ್ರಾಧಿಕಾರವು ನಿರ್ಧಿಷ್ಟ ಪಡಿಸುವ ಷರತ್ತುಗಳಿಗೊಳಪಟ್ಟು ದಸ್ತಾವೇಜನ್ನು ಮಾಡಿಕೊಡತಕ್ಕದ್ದು.
14. ಬಿಡ್ ಮಾಡುವವರು ಭಾರತೀಯ ಪ್ರಜೆಯಾಗಿರಬೇಕು.
15. ಬಿಡ್ ಒಪ್ಪುವ ಅಥವಾ ತಿರಸ್ಕರಿಸುವ ಅಧಿಕಾರ ಆಯುಕ್ತರು/ ಬಿಡ್ ಅಧಿಕಾರಿಗೆ ಸೇರಿರುತ್ತದೆ. ಈ ರೀತಿ ಒಪ್ಪಿದ ಬಿಡ್ ಪ್ರಾಧಿಕಾರದ ಸಭೆಯ ಸ್ಥಿರೀಕರಣಕ್ಕೊಳಪಟ್ಟಿರುತ್ತದೆ.

### ಷರತ್ತುಗಳು

1. ಬಹಿರಂಗ ಹರಾಜನ್ನು ಆಯಾಯ ವಾಣಿಜ್ಯ ಸಂಕೀರ್ಣಗಳು ಇರುವ ಸ್ಥಳಗಳಲ್ಲಿ ನಿಗಧಿಪಡಿಸಿದ ದಿನಾಂಕ ಮತ್ತು ಸಮಯದಲ್ಲಿ ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತರಿಂದ ಅಥವಾ ಅವರಿಂದ ಅಧಿಕಾರ ಪಡೆದವರಿಂದ ಮಳಿಗೆಗಳನ್ನು ಕ್ರಮ ಸಂಖ್ಯೆ ರೀತ್ಯಾ ಹರಾಜು ಮಾಡಲಾಗುವುದು.
2. ವಾಣಿಜ್ಯ ಮಳಿಗೆಗಳಿಗೆ ಅತ್ಯಂತ ಹೆಚ್ಚಿನ ಬಿಡ್ಡುದಾರರನ್ನು ತಾತ್ಕಾಲಿಕವಾಗಿ ಅಂಗೀಕರಿಸಿ, 6 ವರ್ಷಕ್ಕೆ ಪರವಾನಗಿಯನ್ನು ಪ್ರಾಧಿಕಾರದಿಂದ ಮಂಜೂರು ಮಾಡಿಕೊಡಲಾಗುವುದು. ತದನಂತರ ಯಶಸ್ವಿ ಬಿಡ್ಡುದಾರರ ಖರ್ಚಿನಲ್ಲಿ ನೊಂದಣಿ ಮಾಡಿಕೊಡಲಾಗುವುದು ಹಾಗೂ 6 ವರ್ಷಗಳ ನಂತರ ಯಾವುದೇ ತಂಟೆ ತಕರಾರು ಮಾಡದೆ ಮಳಿಗೆಗಳು ಹೇಗೆ ಪಡೆಯಲಾಗಿತ್ತೋ, ಅದೇ ಸ್ಥಿತಿಯಲ್ಲಿ ಮಳಿಗೆಗಳನ್ನು ನಗರಾಭಿವೃದ್ಧಿ ಪ್ರಾಧಿಕಾರದ ಸುಪರ್ದಿಗೆ ವಹಿಸಬೇಕು.
3. ಅಂಗೀಕೃತ ಬಿಡ್ಡುದಾರರ ಪ್ರೀಮಿಯಂ ಮುಂಗಡವನ್ನು ಗುತ್ತಿಗೆ ಅವಧಿ ಮುಗಿದ ನಂತರ ಬಡ್ಡಿ ರಹಿತವಾಗಿ ಹಿಂದಿರುಗಿಸಲಾಗುವುದು.
4. ಮಾಸಿಕ ಪ್ರೀಮಿಯಂದಾರರು ಗುತ್ತಿಗೆ ಅವಧಿ ಪೂರ್ಣಗೊಳ್ಳುವ ಮೊದಲೇ ಮಳಿಗೆಯನ್ನು ತೆರವುಗೊಳಿಸಲು ಇಚ್ಚಿಸಿದ್ದಲ್ಲಿ ಮರುಪಾವತಿಯ ಠೇವಣಿಯನ್ನು ಈ ಕೆಳಕಂಡಂತೆ ಪಾವತಿಸಲಾಗುವುದು.
   * ಮಾಸಿಕ ಪ್ರೀಮಿಯಂದಾರನು 1 ವರ್ಷದೊಳಗೆ ಗುತ್ತಿಗೆ ಅವಧಿಯ ಮಳಿಗೆಯನ್ನು ತೆರವುಗೊಳಿಸಲು ಇಚ್ಚಿಸಿದ್ದಲ್ಲಿ ಮರುಪಾವತಿಯ ಠೇವಣಿಯ ಒಟ್ಟು ಮೊತ್ತದಲ್ಲಿ ಶೇಕಡ 50 ರಷ್ಟನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
   * ಮಾಸಿಕ ಪ್ರೀಮಿಯಂದಾರನು 2 ಮತ್ತು 3 ವರ್ಷದೊಳಗೆ ಗುತ್ತಿಗೆ ಅವಧಿಯ ಮಳಿಗೆಯನ್ನು ತೆರವುಗೊಳಿಸಲು ಇಚ್ಚಿಸಿದ್ದಲ್ಲಿ ಮರುಪಾವತಿಯ ಠೇವಣಿಯ ಒಟ್ಟು ಮೊತ್ತದಲ್ಲಿ ಶೇಕಡ 30 ರಷ್ಟನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
   * ಮಾಸಿಕ ಪ್ರೀಮಿಯಂದಾರನು 4ನೇ ವರ್ಷದಲ್ಲಿ ಗುತ್ತಿಗೆ ಅವಧಿಯ ಮಳಿಗೆಯನ್ನು ತೆರವುಗೊಳಿಸಲು ಇಚ್ಚಿಸಿದ್ದಲ್ಲಿ ಮರುಪಾವತಿಯ ಠೇವಣಿಯ ಒಟ್ಟು ಮೊತ್ತದಲ್ಲಿ ಶೇಕಡ 20 ರಷ್ಟನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
   * ಮಾಸಿಕ ಪ್ರೀಮಿಯಂದಾರನು 5ನೇ ವರ್ಷದಲ್ಲಿ ಗುತ್ತಿಗೆ ಅವಧಿಯ ಮಳಿಗೆಯನ್ನು ತೆರವುಗೊಳಿಸಲು ಇಚ್ಚಿಸಿದ್ದಲ್ಲಿ ಮರುಪಾವತಿಯ ಠೇವಣಿಯ ಒಟ್ಟು ಮೊತ್ತದಲ್ಲಿ ಶೇಕಡ 12 ರಷ್ಟನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. 6ನೇ ವರ್ಷದಲ್ಲಿ ಯಾವುದೇ ಮೊತ್ತ ಪಾವತಿಸುವುದಿಲ್ಲ.
5. ವಾಣಿಜ್ಯ ಮಳಿಗೆಗಳ ಅತ್ಯಂತ ಹೆಚ್ಚಿನ ಬಿಡ್ಡುದಾರರು ಶೇಕಡ 35 ರಷ್ಟು ಬಿಡ್ಡು ಮೊಬಲಗನ್ನು ಆ ದಿನವೇ ಪಾವತಿ ಮಾಡಬೇಕು. ಒಂದು ವೇಳೆ ವಿಫಲವಾದಲ್ಲಿ ಠೇವಣಿಗಾಗಿ (ರೂ.10,000) ಪಾವತಿಸಿರುವ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
6. ಉಳಿದ ಮಾಸಿಕ ಪ್ರೀಮೀಯಂ ಮೊತ್ತವನ್ನು (Non refundable) 30 ದಿನಗಳ ಒಳಗಾಗಿ / ಸ್ಥಿರೀಕರಣವಾದ ನಂತರ ಪಾವತಿಸತಕ್ಕದ್ದು, ಯಾವುದೇ ಕಾರಣಕ್ಕೂ ಅವಧಿ ವಿಸ್ತರಿಸುವುದಿಲ್ಲ. ತಪ್ಪಿದಲ್ಲಿ ಹರಾಜು ದಿವಸ ಪಾವತಿಸಿದ ಶೇಕಡ 35 ರಷ್ಟು ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಹಾಗೂ ಸದರಿ ಮಳಿಗೆಗಳ ಮರು ಹರಾಜಿಗೆ ಅನುಮತಿ ನೀಡಲಾಗುವುದು.
7. ವಾಣಿಜ್ಯ ಮಳಿಗೆಗಳಿಗಾಗಿ ಅರ್ಜಿ ಜೊತೆಯಲ್ಲಿ ಠೇವಣಿ ಮೊತ್ತ ಪಾವತಿಸಿದ್ದಲ್ಲಿ ಮಾತ್ರ ಬಹಿರಂಗ ಹರಾಜಿನಲ್ಲಿ ಭಾಗವಹಿಸಲು ಅನುಮತಿ ನೀಡಲಾಗುವುದು. ಬಹಿರಂಗ ಹರಾಜಿನಲ್ಲಿ ಯಶಸ್ವಿಯಾಗದ ಬಿಡ್ಡುದಾರರಿಗೆ ಪಾವತಿಸಿದ ಠೇವಣಿಯನ್ನು ಅಂದೇ ಮರುಪಾವತಿ ಮಾಡಲಾಗುವುದು.
8. ಬಹಿರಂಗ ಹರಾಜಿನ ಯಶಸ್ವಿ ಬಿಡ್ಡುದಾರರಿಗೆ ಮಳಿಗೆ ಗುತ್ತಿಗೆ ಕರಾರು ಆದ ದಿನಾಂಕದಿಂದ ಪರವಾನಗಿ ಶುಲ್ಕವನ್ನು ವಸೂಲಾತಿಗೆ ಪರಿಗಣಿಸಲಾಗುವುದು.
9. ಯಶಸ್ವಿ ಬಿಡ್ಡುದಾರರು ಕಟ್ಟಡದ ಮಳಿಗೆಗಳನ್ನು ಪ್ರಾಧಿಕಾರದವರ ಸೂಕ್ತ ಅನುಮತಿ ಪಡೆಯದೇ ಬೇರೆ ವ್ಯಕ್ತಿಗಳಿಗೆ ಮರು ಗುತ್ತಿಗೆ (Sub lease) ಮಾಡತಕ್ಕದ್ದಲ್ಲ.
10. ಕಟ್ಟಡದ ಮಳಿಗೆಗಳಲ್ಲಿ ಸ್ಫೋಟಕ ವಸ್ತುಗಳನ್ನು, ಮದ್ಯ ಮಾಂಸ ಮಾರಾಟ, ಗ್ಯಾರೇಜ್ / ವಾಹನ ರಿಪೇರಿ ಚಟುವಟಿಕೆಗಳನ್ನು ಮಾಡಬಾರದು. ಅಲ್ಲದೇ ಕಾನೂನು ಬಾಹಿರ ವ್ಯಾಪಾರಗಳನ್ನು ಮಾಡಬಾರದು. ಈ ಅಧಿಕಾರವನ್ನು ಪ್ರಾಧಿಕಾರವು ಕಾಯ್ದಿರಿಸಿಕೊಂಡಿರುತ್ತೆ. ವ್ಯಾಪಾರ ಪ್ರಾರಂಭಿಸುವ ಮುನ್ನಾ ಪೌರಾಯುಕ್ತರು, ನಗರಸಭೆ, ತುಮಕೂರು ಇವರಿಂದ ಅಥವಾ ಸಕ್ಷಮ ಪ್ರಾಧಿಕಾರದಿಂದ ಕಾನೂನು ಪ್ರಕಾರ ಉದ್ದಿಮೆ ಪರವಾನಗಿ ಪಡೆದು ಮಳಿಗೆ ಬಳಸಿಕೊಳ್ಳತಕ್ಕದ್ದು. ಈ ದಾಖಲೆಗಳನ್ನು ಪ್ರಾಧಿಕಾರಕ್ಕೆ ಸಲ್ಲಿಸಿ ಅನುಮತಿ ಪಡೆಯತಕ್ಕದ್ದು ಮತ್ತು ಒಪ್ಪಂದ ಕರಾರಿನ ದಸ್ತಾವೇಜಿಗೆ ಕ್ರಮವಹಿಸುವುದು.
11. ಮಂಜೂರಾದ ಮಳಿಗೆಗಳ ಮೇಲೆ ಹೆಚ್ಚುವರಿ ಕಟ್ಟಡ ಕಟ್ಟುವ ಹಕ್ಕನ್ನು ಪ್ರಾಧಿಕಾರ ಕಾಯ್ದಿರಿಸಿಕೊಂಡಿರುತ್ತದೆ. ಈ ಬಗ್ಗೆ ಗುತ್ತಿಗೆದಾರರು ಯಾವುದೇ ತಂಟೆ ತಕರಾರು ಮಾಡಲು ಅವಕಾಶವಿರುವುದಿಲ್ಲ.
12. ಹರಾಜು ಪಡೆದು ಮಳಿಗೆಗೆ ಮಾಹೆಯಾನ ವಿದ್ಯುಚ್ಛಕ್ತಿ ಶುಲ್ಕವನ್ನು, ಇತರೇ ಸರ್ಕಾರದ ಶುಲ್ಕಗಳು, ಉದ್ದಿಮೆ ಶುಲ್ಕ ಮತ್ತು ಇತರೇ ನಿರ್ವಹಣೆ ಮುಂತಾದವುಗಳನ್ನು ಗುತ್ತಿಗೆದಾರರು ಪಾವತಿಸಬೇಕು.
13. ಗುತ್ತಿಗೆದಾರನು ತಿಂಗಳ ಪ್ರೀಮಿಯಂ ಮೊತ್ತವನ್ನು ಮುಂದಿನ ತಿಂಗಳ 5ನೇ ತಾರೀಖಿನೊಳಗೆ ಪಾವತಿ ಮಾಡದಿದ್ದಲ್ಲಿ ಸಾಲಿಯಾನ ಶೇಕಡ 24 ರಷ್ಟು ಬಡ್ಡಿ ವಿಧಿಸಿ ವಸೂಲಿ ಮಾಡಲಾಗುವುದು. ಒಂದು ವೇಳೆ ಪ್ರೀಮಿಯಂ ಮೊತ್ತವನ್ನು ನಿರಂತರವಾಗಿ 6 ತಿಂಗಳ ಕಾಲ ಪಾವತಿಸದಿದ್ದಲ್ಲಿ ಮಳಿಗೆಯ ಕರಾರು ಪತ್ರವನ್ನು ವಜಾ ಮಾಡಲಾಗುವುದು ಹಾಗೂ ಠೇವಣಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಒಂದು ವೇಳೆ ಗುತ್ತಿಗೆದಾರರು ಮಳಿಗೆಯನ್ನು ಮರು ಗುತ್ತಿಗೆಗೆ ನೀಡಿದಲ್ಲಿ, ಯಾವುದೇ ತಿಳುವಳಿಕೆ ನೀಡದೆ, ಕರಾರು ಪತ್ರವನ್ನು ರದ್ದುಗೊಳಿಸಿ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಂಡು ಕ್ರಮಕೈಗೊಳ್ಳಲಾಗುವುದು.
14. ಮೇಲ್ಕಂಡ ಎಲ್ಲಾ ಷರತ್ತುಗಳಿಗೆ ಒಪ್ಪಿ ಒಪ್ಪಂದ ಮಾಡಿಕೊಳ್ಳಬೇಕು ಹಾಗೂ ನೊಂದಣಾಧಿಕಾರಿಗಳ ಕಛೇರಿಯಲ್ಲಿ ಕಡ್ಡಾಯವಾಗಿ ನೊಂದಾಯಿಸಿಕೊಡತಕ್ಕದ್ದು.
15. ಗುತ್ತಿಗೆದಾರರು ಕಾಲಾನುಕಾಲಕ್ಕೆ ಜಾರಿಯಾಗಬಹುದಾದ ಸರ್ಕಾರ / ಪ್ರಾಧಿಕಾರದ ನಿಯಮಗಳಿಗೆ ಬದ್ದರಾಗಿರತಕ್ಕದ್ದು.
16. ಮೇಲ್ಕಂಡ ಷರತ್ತುಗಳಲ್ಲಿ ಯಾವುದೇ ಷರತ್ತನ್ನು ರದ್ದುಪಡಿಸುವ / ಸೇರ್ಪಡೆಗೊಳಿಸುವ ಹಕ್ಕನ್ನು ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ತುಮಕೂರು ಹಾಗೂ ಸರ್ಕಾರ ಹೊಂದಿರುತ್ತದೆ.
17. ಪ್ರಾಧಿಕಾರದ ನಿಯೋಜಿತ ಸಿಬ್ಬಂದಿ ಯಾವುದೇ ಸಂದರ್ಭದಲ್ಲಿ ಮಳಿಗೆಗಳನ್ನು ವ್ಯಾಪಾರ / ಚಟುವಟಿಕೆಗಳನ್ನು ಪರಿಶೀಲಿಸಿ / ವೀಕ್ಷಿಸಲು ಅಧಿಕಾರ ಹೊಂದಿರುತ್ತಾರೆ.

ಸಹಿ/–
**(ಎಸ್.ಆರ್.ಶ್ರೀಧರಮೂರ್ತಿ)**
ಅಧ್ಯಕ್ಷರು
ನಗರಾಭಿವೃದ್ಧಿ ಪ್ರಾಧಿಕಾರ, ತುಮಕೂರು.

ಸಹಿ/–
**(ಎನ್.ಆರ್.ಆದರ್ಶಕುಮಾರ್)** ಕೆ.ಸಿ.ಎ.ಎಸ್.,
ಆಯುಕ್ತರು
ನಗರಾಭಿವೃದ್ಧಿ ಪ್ರಾಧಿಕಾರ, ತುಮಕೂರು.